# ಲಖ್ನೋನಲ್ಲಿ ಮೋದಿ

–ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಲಖ್ನೋನಲ್ಲಿ ಇಂದು ನರೇಂದ್ರ ಮೋದಿ ಅವರ ಸಾರ್ವಜನಿಕ ಸಭೆಗೆ ಎಂದಿಲ್ಲದ ಜನಬೆಂಬಲ ಲಭಿಸಿದೆ. ದೆಹಲಿ ತಲುಪುವ ಮಾರ್ಗ ಉತ್ತರ ಪ್ರದೇಶದ ಮೂಲಕ ಸಾಗುತ್ತದೆ. ಲೋಕಸಭೆಗೆ ೮೦ ಸದಸ್ಯರನ್ನು ಆಯ್ಕೆ ಮಾಡಿಕಳುಹಿಸುವ ದೇಶದಲ್ಲೇ ಬಹು ವಿಶಾಲ ರಾಜ್ಯ ಅದಾಗಿದೆ. ಭಾಜಪ 1990ರಲ್ಲಿ ಹೆಚ್ಚಿನ ಸ್ಥಾನಗಳಿಸಿದ್ದಾಗ ಉತ್ತರ ಪ್ರದೇಶದಲ್ಲಿ ಅದರ ಬಲಾಬಲ ಪ್ರಮುಖ ಪಾತ್ರ ವಹಿಸಿತ್ತು. 1991ರ ಸಾರ್ವತ್ರಿಕ ಚುನಾವಣೆಯಲ್ಲಿ ಅಖಂಡ ಉತ್ತರಪ್ರದೇಶ ರಾಜ್ಯದ 85 ಲೋಕ ಸಭಾ ಕ್ಷೇತ್ರಗಳಲ್ಲಿ ಭಾಜಪ 52ನ್ನು ಗೆದ್ದುಕೊಂಡಿತ್ತು. 1996ರಲ್ಲಿ ಪಕ್ಷವು 58 ಸೀಟುಗಳನ್ನು ಗಳಿಸಿತು( ಮಿತ್ರಪಕ್ಷಗಳು ಎರಡನ್ನು ಗಳಿಸಿದ್ದು ಸೇರಿದಂತೆ) ಮತ್ತು 1998ರಲ್ಲಿ 50 ಅದರ ಪಾಲಾಗಿತ್ತು. ಅಂದಿನಿಂದ ಭಾಜಪ ಬಲಾಬಲ ತಗ್ಗುತ್ತ ಬಂದಿದೆ. 1999ರಲ್ಲಿ ಪಕ್ಷ ಕೇವಲ 29 ಸೀಟುಗಳನ್ನು ಗಳಿಸುವಲ್ಲಿ ಯಶಸ್ವಿಯಾಯಿತು. 2004 ಹಾಗೂ 2009ರ ಚುನಾವಣೆಗಳಲ್ಲಿ ಅದರ ಸಂಖ್ಯೆ ಕೇವಲ 10ಕ್ಕೆ ಇಳಿಯಿತು. ದೆಹಲಿಯಲ್ಲಿ ಸರ್ಕಾರ ಮಾಡಲು ಭಾಜಪ 1990ರ ಪೂರ್ವದಲ್ಲಿ ಗಳಿಸಿದ ಸ್ಥಾನಗಳನ್ನು ಪುನಃ ಪಡೆಯುವುದು ಆವಶ್ಯಕ. ಇದು ಸಾಧ್ಯವಿದೆಯೇ?

ಉತ್ತರ ಪ್ರದೇಶದಲ್ಲಿ ಚುನಾವಣಾ ಹಣಾಹಣಿ ಏರ್ಪಟ್ಟಿರುವುದು ಕೇವಲ ಭಾಜಪ, ಎಸ್‌ಪಿ ಮತ್ತು ಬಿಎಸ್‌ಪಿ ನಡುವೆ. 2009ರಲ್ಲಿ ಕಾಂಗ್ರೆಸ್‌ಗೆ 22 ಸ್ಥಾನಗಳು ಲಭಿಸಿದ್ದು ಅಚ್ಚರಿ ಮೂಡಿಸಿತ್ತು. ಪ್ರಸ್ತುತ ಸನ್ನಿವೇಶದ ವಿದ್ಯಮಾನಗಳ ಅನುಸಾರ ಈ ಬಾರಿ ಕಾಂಗ್ರೆಸ್ ಶಕ್ತಿ ಕುಂದಿದೆ. ಆಮ್ ಆದ್ಮಿ ಪಕ್ಷವು ಸುದ್ದಿ ಮಾಡುತ್ತಿದೆ ಹಾಗೂ ಎಲ್ಲರ ಗಮನ ಸೆಳೆಯುತ್ತಿದೆ. ಆದರೂ ಯುಪಿಯಲ್ಲಿ ಅದರ ಚುನಾವಣಾ ಪ್ರದರ್ಶನ ಅಷ್ಟೇನು ಉತ್ತಮವಾಗಿರಲಾರದು.

ಬಿಎಸ್‌ಪಿ ಹಾಗೂ ಎಸ್‌ಪಿ ಪಕ್ಷಗಳು ಉತ್ತಮ ಆಡಳಿತದ ದಾಖಲೆ ಹೊಂದಿಲ್ಲ. ಸಮಾಜವಾದಿ ಪಕ್ಷದ ಆಳ್ವಿಕೆ ಅಧ್ವಾನವಾಗಿದೆ. ಆ ಪಕ್ಷ ಅಧಿಕಾರಕ್ಕೆ ಬಂದಾಗಲೆಲ್ಲ ಯುಪಿ ರಾಜ್ಯದ ಕಾನೂನು ಸುವ್ಯವಸ್ಥೆ ಹದಗೆಡುತ್ತದೆ. ಸಾಮಾಜಿಕ ಹಾಗೂ ಕೋಮು ಸಾಮರಸ್ಯ ಕದಡಿದೆ. ಉತ್ತರಪ್ರದೇಶವು ಹಲವಾರು ಕೋಮು ಗಲಭೆಗಳನ್ನು ಎದುರಿಸಿದೆ. ಹಣ ವಸೂಲು ಮಾಡುವ ಪಕ್ಷವೆಂದು ಬಿಎಸ್‌ಪಿ ಹೆಸರು ಕೆಡಿಸಿಕೊಂಡಿದೆ. ನಿರಂಕುಷ ಪ್ರಭುತ್ವ ಮೆರೆದ ಪಕ್ಷವದು. ಯುಪಿಎ ಸರ್ಕಾರ ಕಳೆದ 10 ವರ್ಷಗಳು ಅಸ್ತಿತ್ವ ಉಳಿಸಿಕೊಳ್ಳಲು ಈ ಎರಡು ಪಕ್ಷಗಳೇ ಕಾರಣ. ಯುಪಿಎ ಸಮರ್ಥಿಸುವ ಮೂಲಕ ವೈಯಕ್ತಿಕ ಲಾಭಗಳಿಸುವ ತಂತ್ರಗಾರಿಕೆ ಅವರದ್ದಾಗಿದೆ. ಈ ಎರಡೂ ಪಕ್ಷಗಳ ನಾಯಕರು ಎದುರಿಸುತ್ತಿರುವ ಭ್ರಷ್ಟಾಚಾರ ಪ್ರಕರಣಗಳ ತನಿಖೆ ನಡೆಸುತ್ತಿರುವ ಸಿಬಿಐ ತನಿಖಾ ಸಂಸ್ಥೆಯ ಕದಂಬಬಾಹುವಿನಿಂದ ತಪ್ಪಿಸಿಕೊಳ್ಳುವ ಯತ್ನ ಇದಾಗಿದೆ.

ಉತ್ತರ ಪ್ರದೇಶದ ಜನಾದೇಶದಲ್ಲಿ ಸ್ಪಷ್ಟ ಬದಲಾವಣೆ ಗೋಚರಿಸುತ್ತಿದೆ. ಜಾತಿ ಆಧಾರಿತ ಮಾನ್ಯತೆಗಳು ಹಿಂದೆ ಸರಿದಿದೆ. ಸಾಮಾಜಿಕ ಪ್ರತ್ಯೇಕತೆ ಕಣ್ಮರೆಯಾಗದಿದ್ದರು ಅದರ ಪ್ರಾಧಾನ್ಯತೆ ತುಲನಾತ್ಮಕ ಇಳಿಕೆ ಕಂಡಿದೆ. ನರೇಂದ್ರ ಮೋದಿ ಅವರು ಭಾಗವಹಿಸಿದ ಎಂಟು ಸಾರ್ವಜನಿಕ

ಸಭೆಗೆ ಜನರು ಕಿಕ್ಕಿರಿದು ತುಂಬಿದ್ದರು. ಉತ್ತರ ಪ್ರದೇಶದಲ್ಲಿ ಆಳ್ವಿಕೆ ವಿಚಾರಗಳು ಪ್ರಾಧಾನ್ಯತೆ ಗಳಿಸಿವೆ. ಯುಪಿಯಲ್ಲಿ ಅಭಿಲಾಶೆಯ ರಾಜಕಾರಣ ತಲೆಯೆತ್ತಿದೆ. ಉತ್ತರ ಪ್ರದೇಶ ರಾಜಕಾರಣದ ಮೂಲ ಸ್ವರೂಪವೇ ಬದಲಾಯಿಸಿದೆ. ಇಂದು ಮೋದಿಯವರು ತಮ್ಮ ಭಾಷಣದ ಅಂತ್ಯದಲ್ಲಿ ಪ್ರಸೂನ್ ಜೋಶಿ ಅವರ ಕವಿತೆಯ ಸಾಲುಗಳನ್ನು ವಾಚಿಸಿದಾಗ ನನಗೆ 1977ರ ಸಾರ್ವತ್ರಿಕ ಚುನಾವಣೆಗಳ ಸಂದರ್ಭದಲ್ಲಿ ಭಾಷಣಕಾರರು ದಿನಕರ್ ಅವರ ಕವಿತೆಯ ಜನಪ್ರಿಯ ಸಾಲು "ಸಿಂಹಾಸನ್ ಖಾಲಿ ಕರೊ ಜನತಾ ಆತಿ ಹೇ" ಅನ್ನು ಹೇಳುತ್ತಿದದ್ದು ಸ್ಮರಣೆಗೆ ಬರುತ್ತದೆ.